ಇತ್ಯರ್ಥವಾಗುತ್ತದೆ. ಇದನ್ನು ಆದಷ್ಟು ಬೇಗ ಮಾಡಬೇಕು. ಅವರು ಏನು ಮಾಡುತ್ತೇವೆಂದು ಹೇಳಲಿಲ್ಲವಲ್ಲ.

ಅಧ್ಯಕ್ಷರು: ಮಾನ್ಯ ಸಚಿವರು ಅದರ ಬಗ್ಗೆ ಒಂದು ಪ್ರತ್ಯೇಕ ಸಭೆಯನ್ನು ಕರೆಯುತ್ತೇನೆಂದು ಹೇಳಿದರು. ಅಲ್ಲಿ ಇದರ ಬಗ್ಗೆ discussion ಮಾಡಿ.

ಶ್ರೀ ಬಸವರಾಜ ಬೊಮ್ಮಾಯಿ: ಒಂದು ಸಭೆ ಕರೆಯುತ್ತೇನೆ, ಅಲ್ಲಿ ಚರ್ಚೆ ಮಾಡೋಣ.

ಸರ್ಕಾರಿ ಜಮೀನನ್ನು ಮಂಜೂರು ಮಾಡಿರುವುದು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**69(118)**
ಸದಸ್ಯರ ಹೆಸರು	:	**ಶ್ರೀ ವಿಶ್ವನಾಥ್ ಎಸ್.ಆರ್. (ಯಲಹಂಕ)**
ಉತ್ತರಿಸುವವರು	:	**ಶ್ರೀ ಕರುಣಾಕರರೆಡ್ಡಿ (ಕಂದಾಯ ಸಚಿವರು)**

ಅ) ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ, ಸಾದೇನಹಳ್ಳಿ, ಅದ್ದೆ ವಿಶ್ವನಾಥಪುರ, ಚೊಕ್ಕನಹಳ್ಳಿ ಗ್ರಾಮಗಳಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಎಕರೆ ಸರ್ಕಾರಿ ಜಮೀನು ಯಾವ ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆ. ಉಳಿದ ಸರ್ಕಾರಿ ಜಮೀನು ಎಷ್ಟು ಗ್ರಾಮವಾರು ಮಾಹಿತಿ ಒದಗಿಸುವುದು;

ಕೃಷಿ ಉದ್ದೇಶಕ್ಕಾಗಿ 2 ಎಕರೆ 2 ಗುಂಟೆ ಮತ್ತು ಸರ್ಕಾರಿ ಸಂಸ್ಥೆಗಳಿಗೆ 23 ಎಕರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ. ಉಳಿಕೆ ಸರ್ಕಾರಿ ಜಮೀನಿನ ಒಟ್ಟು ವಿಸ್ತೀರ್ಣ 548.25 ಎಕರೆ ಗ್ರಾಮವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಈ ಮೇಲ್ಕಂಡ ಗ್ರಾಮಗಳ್ಲಿ ಯಾರು ಯಾರಿಗೆ ಸರ್ಕಾರಿ ಜಮೀನು ಮಂಜೂರಾಗಿರುತ್ತದೆ. ಇದಕ್ಕಾಗಿ ಸರ್ಕಾರದ ಅನುಸರಿಸಿದ ಮಾನದಂಡವೇನು, ಪೂರ್ಣ ಮಾಹಿತಿಯೊಂದಿಗೆ ಫಲಾನುಭವಿಗಳ ಪಟ್ಟಿಯನ್ನು ಒದಗಿಸುವು;

ಕರ್ನಾಟಕ ಭೂ ಕಂದಾಯ ಕಾಯ್ದೆಯ ಕಲಂ 94 (ಬಿ) ರಡಿಯಲ್ಲಿ ಅನಧಿಕೃತ ಸಾಗುವಳಿ ಸಕ್ರಮೀಕರಣಕ್ಕಾಗಿ ಸಲ್ಲಿಸಲಾದ ಅರ್ಜಿಗಳನ್ನು ಸಂಬಂಧಪಟ್ಟ ವಿಧಾನ ಸಭಾ ಸದಸ್ಯರ ಅಧ್ಯಕ್ಷತೆಯಲ್ಲಿನ ಬಗರ್ ಹುಕುಂ ಸಕ್ರಮೀಕರಣ ಸಮಿತಿಯ

ಮುಂದೆ ಮಂಡಿಸಲಾಗಿತ್ತು. ಸದರಿ ಸಮಿತಿಯಲ್ಲಿ ದಿ: 31.08.05ರಂದು ಈ ಕೆಳಕಂಡವರಿಗೆ ಸಕ್ರಮಗೊಳಿಸಿ ಮಂಜೂರು ಮಾಡಲಾಗಿರುತ್ತದೆ.

ಕ್ರ.ಸ	ಫಲಾನುಭವಿಗಳ ಹೆಸರು	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)
1	ಎಸ್.ಎಂ.ಪಟಾಲಯ್ಯ ಬಿನ್ ಮುನಿನಂಜಪ್ಪ	ಸಾದೇನಹಳ್ಳಿ	30	0.22
2	ಅಶ್ವಥ್ ನಾರಾಯಣ ರೆಡ್ಡಿ	ಅದ್ದೆವಿಶ್ವನಾಥಪುರ	69	0.20
3	ಆರ್.ಡಿ. ರಾಮಯ್ಯ ಬಿನ್ ದೊಡ್ಡತಿಮ್ಮಯ್ಯ	ಅದ್ದೆವಿಶ್ವನಾಥಪುರ	68	0.10
4	ಸುರೇಶಬಾಬು ಬಿನ್ ಕೃಷ್ಣಪ್ಪ	ಅದ್ದೆವಿಶ್ವನಾಥಪುರ	70	0.30
			ಒಟ್ಟು	**2.02**

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 265 ಎಲ್‌ಜಿಬಿ 2007 (ಪಿ6), ದಿ: 23.10.2007ರಂತೆ ಬಿಎಂಟಿಸಿಗೆ 21 ಎಕರೆ ಹಾಗೂ ಕೆಪಿಟಿಸಿಎಲ್‌ಗೆ 2 ಎಕರೆ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ.

ಅನುಬಂಧ

ಮಂಜೂರು ಮಾಡಲಾದ ಸರ್ಕಾರಿ ಜಮೀನಿನ ವಿವರ.

ಕ್ರ.ಸ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಕ್ರ.ಸ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)
ಕೃಷಿ ಉದ್ದೇಶಕ್ಕಾಗಿ				ಸರ್ಕಾರಿ ಸ್ವಾಯತ್ತ ಸಂಸ್ಥೆಗಳಿಗೆ			
				ಬಿಎಂಟಿಸಿ			ಕೆಪಿಟಿಸಿಎಲ್
1	ಸಾದೇನಹಳ್ಳಿ	30	0.22	ಸಾದೇನಹಳ್ಳಿ	20	5.00	2.00
2	ಅದ್ದೆವಿಶ್ವನಾಥಪುರ	69	0.20	ಸಾದೇನಹಳ್ಳಿ	24	10.00	–
3	ಅದ್ದೆವಿಶ್ವನಾಥಪುರ	68	0.10	ಸಾದೇನಹಳ್ಳಿ	30	6.00	–
4	ಅದ್ದೆವಿಶ್ವನಾಥಪುರ	70	0.30		ಒಟ್ಟು	**21.00**	**2.00**
ಒಟ್ಟು			**2.02**				

ಉಳಿಕೆ ಸರ್ಕಾರಿ ಜಮೀನಿನ ವಿವರ

ಕ್ರ.ಸ	ಗ್ರಾಮ	ಸ.ನಂ.	ವಿಸ್ತೀರ್ಣ (ಎ-ಗುಂ)
1	ಚೊಕ್ಕನಹಳ್ಳಿ	60 (ಗೋಮಾಳ)	26.00
	-"-	7	23.00
	-"-	37	2.15
	-"-	59	9.12
	-"-	60(ಖರಾಬು)	26.00
		ಒಟ್ಟು ವಿಸ್ತೀರ್ಣ	**86.27**
2	ಅದ್ದೆವಿಶ್ವನಾಥಪುರ	29	0.17
	-"-	63	30.10
	-"-	67	30.00
	-"-	68	32.26
	-"-	70	24.19
	-"-	81	88.20
	-"-	121	15.05
	-"-	69	23.15
		ಒಟ್ಟು ವಿಸ್ತೀರ್ಣ	**244.32**
3	ಸಾದೇನಹಳ್ಳಿ	15	0.06
	-"-	24	10.36
	-"-	30	159.30
	-"-	31	10.39
	-"-	74	0.05
	-"-	133	6.16
	-"-	20	28.34
		ಒಟ್ಟು ವಿಸ್ತೀರ್ಣ	**217.06**
		3 ಗ್ರಾಮಗಳ ಒಟ್ಟು ವಿಸ್ತೀರ್ಣ	**548.25**

ಶ್ರೀ ಎಸ್. ಆರ್. ವಿಶ್ವನಾಥ್: ಮಾನ್ಯ ಅಧ್ಯಕ್ಷರೆ, ನಾವು ಕೊನೇ ಬೆಂಚಿನಲ್ಲಿರುವುದರಿಂದ ಅವಕಾಶ ಸಿಗುತ್ತದೆಯೋ ಇಲ್ಲವೋ ಎಂದುಕೊಂಡಿದ್ದೆನು. ನನಗೆ ಅವಕಾಶ ಒದಗಿಸಿ ಕೊಟ್ಟಿರುವುದಕ್ಕೆ ಮಾನ್ಯ ಸಭಾಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸುತ್ತಾ, ನಾನು ಯಲಹಂಕ ಕ್ಷೇತ್ರದಿಂದ ಆಯ್ಕೆಯಾಗಿ ಬಂದಿದ್ದೇನೆ. ಅದು ಬೆಂಗಳೂರಿಗೆ ಬಹಳ ಸಮೀಪವಾಗಿರತಕ್ಕಂಥ ಕ್ಷೇತ್ರ. ಇದು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೊಂದಿಕೊಂಡಿರುವಂತಹ ಕ್ಷೇತ್ರ. ಅಲ್ಲಿ ಭೂಮಿಯ ಬೆಲೆ ಬಂಗಾರದ ಬೆಲೆ ಇದೆ. ಮೂರು ವರ್ಷದ ಅವಧಿಯಲ್ಲಿ ಭೂ ಮಂಜೂರಾತಿ ಆಗಿರತಕ್ಕಂಥ ವಿಚಾರದಲ್ಲಿ ಯಾರ್ಯಾರಿಗೆ ಆಗಿದೆ ಎಂದು ಕೆಲವು ಹಳ್ಳಿಗಳನ್ನು ಕೆಳಿದ್ದೆನು ಮತ್ತು ನಿಯಮ ಕೇಳಿದ್ದೆನು, ಆದರೆ ನಿಯಮ ಕೊಟ್ಟಿಲ್ಲ. ನನಗೆ ಗೊತ್ತಿರುವ ಪ್ರಕಾರ ನಿಯಮ 1991 ರಲ್ಲಿ ಹಿಂದೆ ಮೂರು ವರ್ಷದಲ್ಲಿ ಯಾರು ಉಳುಮೆ ಮಾಡುತ್ತಿದ್ದರು. ಫಾರಂ 50ಕ್ಕೆ ಯಾರು ಅರ್ಜಿ ಸಲ್ಲಿಸಿರುತ್ತಾರೆ, ಅವರಿಗೆ ಕೊಡಬೇಕೆಂದು ಇತ್ತು. ಅದಾದನಂತರ ಯಾರಿಗೆ ಅವಕಾಶ ಸಿಗಲಿಲ್ಲವೋ ಅವರಿಗೆ 1997–98ರಲ್ಲಿ ಫಾರಂ 53ರಲ್ಲಿ ಮತ್ತೊಂದು ಅವಕಾಶ ಇತ್ತು.

ಒಟ್ಟು ಕುಟುಂಬದ ಮಂಜೂರಾತಿ ಜಾಗವನ್ನೂ ಸೇರಿ 4 ಎಕರೆ 30 ಗುಂಟೆಗೆ ಮೀರದಂತೆ ಇರಬೇಕೆಂಬುದು ಮತ್ತು 1999ಕ್ಕೆ ರೂ. 11,800 ವಾರ್ಷಿಕ ವರಮಾನ ಇರಬೇಕೆಂದು ನಿಯಾಮವಳಿಯಲ್ಲಿತ್ತು. ಆದರೆ, ನನ್ನ ಕ್ಷೇತ್ರದಲ್ಲಿ ಕೆಲವರಿಗೆ ಭೂ ಮಂಜೂರಾತಿ ಮಾಡಿದ್ದರೆ ಇದನ್ನೂ ನಿಯಮಕ್ಕೆ ವಿರುದ್ಧವಾಗಿ ಕೊಟ್ಟಿದ್ದಾರೆ. ಅದನ್ನು ನಾನು ಇಲ್ಲಿ ಪ್ರಸ್ತಾಪಮಾಡುತ್ತಿದ್ದೇನೆ. ಬೆಂಗಳೂರು ಸುತ್ತಮುತ್ತ ಕಾರ್ಪೋರೇಷನ್ ಏರಿಯಾದಲ್ಲಿ 18 ಕಿ.ಮೀ. ಒಳಗೆ ಇರುವ ಜಾಗವನ್ನು ಮಂಜೂರು ಮಾಡಬಾರದು. ಕೇವಲ 17 ಕಿ.ಮೀ. ದೂರದಲ್ಲಿ ಇರತಕ್ಕಂತಹ ಅದ್ದೆವಿಶ್ವನಾಥಪುರದಲ್ಲಿ 9 ಎಕರೆ 35 ಗುಂಟೆ ಜಾಗವನ್ನು ಮಂಜೂರು ಮಾಡಿದ್ದಾರೆ. ತಹಶೀಲ್ದಾರರು ನಮ್ಮ ಕಂದಾಯ ಸಚಿವರಿಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ 2 ಎಕರೆ 3 ಗುಂಟೆ ಎಂದು ಆದರೆ, 9 ಎಕರೆ 35 ಗುಂಟೆ ಜಾಗವನ್ನು ಇತ್ತೀಚೆಗೆ ಮಂಜೂರು ಮಾಡಿದ್ದಾರೆ. ತಹಶೀಲ್ದಾರರು ಕಂದಾಯ ಸಚಿವರಿಗೆ ತಪ್ಪು ಮಾಹಿತಿಯನ್ನು ಕೊಟ್ಟಿದ್ದಾರೆ. ಅಲ್ಲಿ ಯಾವುದೇ ಬೆಲೆ ಬಾಳುವಂತಹ ಮರ ಇಲ್ಲ. ಜಾಗವನ್ನು ಅವರು ಉಳುಮೆ ಮಾಡುತ್ತಿದ್ದರು ಎಂದು ಹೇಳುತ್ತಾರೆ. ನನ್ನ ಹತ್ತಿರ ಅದರ ಫೋಟೋಗಳಿವೆ. ಆ ಜಾಗವನ್ನು ಅವರು developerಗೆ ಕೊಟ್ಟಿದ್ದಾರೆ. ಅವರಿಗೆ ಹಕ್ಕುಪತ್ರವೂ ಸಿಕ್ಕಿಲ್ಲ. ಸುಮಾರು 25 ವರ್ಷಗಳ ಹಿಂದೆ ಮಾಜಿ ಪ್ರಧಾನಿ ದೇವಿಲಾಲ್ ಅವರು ಕಾಡು ಗಿಡವನ್ನು ನೆಟ್ಟಿದ್ದರು. ಆ ಕಾಡು ಗಿಡಗಳನ್ನೆಲ್ಲಾ ಕಡಿದು Developers ಅದನ್ನು ಮಟ್ಟ ಮಾಡುತ್ತಿದ್ದಾರೆ. ಪೋಲಿಸ್ ಕಂಪ್ಲೇಟ್ ಕೂಡ

ಕೊಟ್ಟಿದ್ದೇವೆ. ಆದರೂ ಜಾಗವನ್ನೂ ವಾಪಸ್ಸು ತೆಗೆದುಕೊಳ್ಳುತ್ತಿಲ್ಲ. ಒಬ್ಬರಿಗೆ 19 ಎಕರೆ ಸ್ವಂತ ಜಮೀನು ಇದೆ ಆದರೂ, ಅವರಿಗೆ ಎರಡು ಎಕರೆ ಜಾಗವನ್ನು ಮಂಜೂರು ಮಾಡಿದ್ದಾರೆ. ಕಾನೂನಿನಲ್ಲಿ ಒಟ್ಟು ಜಾಗ 4 ಎಕರೆ 38 ಗುಂಟೆ ಒಟ್ಟು ಕುಟುಂಬ ಎಂದು ಇದ್ದರೂ ಕೂಡ ಒಂದೇ ಹೆಸರಿನಲ್ಲಿ ಅಷ್ಟಿದೆ. ಎರಡನೆಯದಾಗಿ ಒಂದೇ ಕುಟುಂಬದವರು ಬೇರೆ ಬೇರೆಯವರಿಗೆ ಕೊಡುವ ಹಾಗೆ ಇಲ್ಲ. ಬೊಕ್ಕನಹಳ್ಳಿಯಲ್ಲಿ ಸರ್ವೆ ನಂ. 6–7ರಲ್ಲಿ 6 ಜನಕ್ಕೆ ಅವನಿಗೆ, ಅವನ ಹೆಂಡತಿಗೆ, ತಂದೆಗೆ ಮೂರು ಜನ ತಮ್ಮಂದಿರಿಗೆ, ಅಕ್ಕನಿಗೆ ಒಂದೇ ಕುಟುಂಬದವರಿಗೆ ಎರಡೆರೆಡು ಎಕರೆ ಜಮೀನನ್ನು ಮಂಜೂರು ಮಾಡಿದ್ದಾರೆ. ನಾಗದಾಸನ ಹಳ್ಳಿ ಎಂಬ ಪಕ್ಕದ ಗ್ರಾಮ airportಗೆ ಹೊಂದಿಕೊಂಡಿರುವಂತಹ ಜಾಗ. ಅಲ್ಲಿ ಬಡವರು ಉಳುಮೆ ಮಾಡುತ್ತಿದ್ದಾರೆ. PWD ಅವರು ಒಂದು ವರದಿಯನ್ನು ಕೊಟ್ಟಿದ್ದು ಅದರಲ್ಲಿ 21.25 ಕಿ.ಮೀ. ಬರುತ್ತದೆಂದು, ಇನ್ನೊಂದು ವರದಿ ಪ್ರಕಾರ 18.4 ಕಿ.ಮೀ. ಎಂದು ಹೇಳಿದ್ದಾರೆ. ಆದರೆ, ತಹಶೀಲ್ದಾರರು ಮಂಜೂರು ಮಾಡುವಾಗ ಇದು 17 ಕಿಲೋಮೀಟರ್ ಒಳಗೆ ಬರುವುದರಿಂದ ನಿಮಗೆ ಜಾಗ ಮಂಜೂರು ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದ್ದಾರೆ. ಇದು ಯಾವ ರೀತಿ ಅನ್ಯಾಯ ಮಾಡುತ್ತಾರೆ ಎಂದರೆ, ಯಾರು ಬಡವರಿದ್ದಾರೆ, ಅಧಿಕಾರಿಗಳನ್ನು ಸರಿಯಾಗಿ ನೋಡಿಕೊಳ್ಳುವುದಿಲ್ಲ ಅವರಿಗೆ ಮಂಜೂರಾತಿ ಮಾಡುವುದಿಲ್ಲ. ಯಾರು ವ್ಯವಸ್ಥೆ ಮಾಡುತ್ತಾರೆ ಅವರಿಗೆ ಅಧಿಕಾರ ಮೀರಿ ಕೊಡುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಕಂದಾಯ ಸಚಿವರು ಸಮಗ್ರ ತನಿಖೆಯನ್ನು ಮಾಡಬೇಕು. ಇಡೀ ನನ್ನ ಕ್ಷೇತ್ರದ ತನಿಖೆ ಮಾಡಬೇಕು.

ಅಧ್ಯಕ್ಷರು: ಅದರ ಡೀಟೇಲ್‌ನ್ನು ಅವರಿಗೆ ಕೊಡಿ.

ಶ್ರೀ ಸಿ.ಟಿ.ರವಿ: ಇದಕ್ಕೆ ಪೂರಕವಾಗಿ ಒಂದು ಮಾತು.

ಅಧ್ಯಕ್ಷರು: ಬೇಡ. ಅವರು ಕ್ಷೇತ್ರಕ್ಕೆ ಸೀಮಿತವಾಗಿ ಕೇಳಿದ್ದಾರೆ.

ಶ್ರೀ ಜೆ.ಕರುಣಾಕರ ರೆಡ್ಡಿ (ಕಂದಾಯ ಸಚಿವರು): ಮಾನ್ಯ ಸದಸ್ಯರು ಏನು ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದರೆ, ನಿಯಮಾವಳಿ ತಪ್ಪಿಸಿ ಏನು ಭೂ ಮಂಜೂರಾತಿಯಾಗಿದೆ ಎಂಬ ವಿಚಾರವನ್ನು ಹೇಳಿದ್ದಾರೆ ಅದರ ಬಗ್ಗೆ ಖಂಡಿತ ನಾನು ಸಮಗ್ರವಾದ ತನಿಖೆಯನ್ನು ಮಾಡಿ ತಪ್ಪಿತಸ್ಥ ಅಧಿಕಾರಿಗಳು ಆ ರೀತಿ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಸಿ.ಟಿ.ರವಿ: ಬೆಂಗಳೂರು ಸುತ್ತಮುತ್ತ ಬೇರೆ ಬೇರೆ ತಾಲ್ಲೂಕುಗಳಲ್ಲಿ ಇದೇ ರೀತಿಯಾಗಿ ಅಕ್ರಮವಾಗಿ ಮಂಜೂರಾದ ಭೂಪ್ರದೇಶಗಳ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಸಚಿವರು ಈ ತಪ್ಪಿತಸ್ಥ ಅಕ್ರಮಗಳನ್ನು ಬಯಲಿಗೆಳೆಯಲಿ ವಿಶೇಷ ತನಿಖೆಯನ್ನು ಮಾಡುತ್ತೀರಾ?

ಅಧ್ಯಕ್ಷರು: ತಾವು ಇದರ ಬಗ್ಗೆ ಸ್ಪೆಸಿಫಿಕ್ ಆಗಿ ಪ್ರಶ್ನೆ ಕೇಳಿ.

ಮೇಲುಕೋಟೆಯಲ್ಲಿ ಕೈಮಗ್ಗಗಳು ಸ್ಥಗಿತಕೊಂಡಿರುವ ಬಗ್ಗೆ

ಸದಸ್ಯರ ಹೆಸರು	:	ಶ್ರೀ ಪುಟ್ಟರಾಜು ಸಿ.ಎಸ್. (ಮೇಲುಕೋಟೆ)
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	70(387)
ಉತ್ತರಿಸುವ ಸಚಿವರು	:	ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು
ಉತ್ತರಿಸುವ ಸಚಿವರು	:	ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಜವಳಿ ಯುವಜನ ಸೇವೆ ಮತ್ತು ಕ್ರೀಡಾ ಸಚಿವರು)

ಅ) ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯಲ್ಲಿ ನೂರಾರು ಕೈಮಗ್ಗಗಳು ನಿಂತು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ) ಹಾಗಿದ್ದಲ್ಲಿ, ನಿರುದ್ಯೋಗಿ ನೇಕಾರರು ಹಾಗೂ ಕುಟುಂಬಗಳು ಕಷ್ಟದಲ್ಲಿರುವುದರಿಂದ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವತಿಯಿಂದ ಮೇಲುಕೋಟೆಯಲ್ಲಿ ಸ್ಥಾಪಿಸಿರುವ ಉತ್ಪಾದನಾ ಕೇಂದ್ರದಲ್ಲಿ ಪ್ರಸ್ತುತ 42 ಕೈಮಗ್ಗ ನೇಕಾರರಿಗೆ ರೇಷ್ಮೆ ಸೀರ/ಬಟ್ಟೆ ಉತ್ಪಾದನೆಗೆ ಅಗತ್ಯವಾದ ಕಚ್ಚಾಮಾಲನ್ನು ಒದಗಿಸಿ ನಿರಂತರ ಉದ್ಯೋಗ ನೀಡಲು ಕ್ರಮ ಕೈಗೊಳ್ಳಲಾಗಿದೆ.

ಇಲಾಖೆಯ ವಿವಿಧ ಅಭಿವೃದ್ಧಿ ಯೋಜನೆಗಳಡಿ ಮೇಲುಕೋಟೆಯ ಕೈಮಗ್ಗ ನೇಕಾರರ ಅಭಿವೃದ್ಧಿಗಾಗಿ ಸಾಮೂಹಿಕ ನೇಯ್ಗೆ ಕೇಂದ್ರ, ನೇಕಾರರ ವಸತಿ ಕಾರ್ಯಾಗಾರಗಳು, ಸುಧಾರಿತ ಕೈಮಗ್ಗಗಳು, ಜೀವವಿಮೆ ಆರೋಗ್ಯ ವಿಮೆ, ಕುಡಿಯುವ ನೀರಿನ ಸೌಲಭ್ಯ, ಆರೋಗ್ಯ ಸೌಲಭ್ಯಗಳು, ನೇಕಾರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶಿಷ್ಯವೇತನ ಮುಂತಾದ ಸೌಲಭ್ಯಗಳನ್ನು ಒದಗಿಸಲಾಗಿದೆ.
ಕೇಂದ್ರ ಪುರಸ್ಕೃತ ಇಂಟಗ್ರೇಟೆಡ್ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಸ್ಕೀಮ್ (ಐಹೆಚ್‌ಡಿಎಸ್) ನಡಿ 2008–09ನೇ ಸಾಲಿನಲ್ಲಿ ಮೇಲುಕೋಟೆ ಗ್ರಾಮದ 27 ನೇಕಾರರ ಗುಂಪನ್ನು ರಚಿಸಿ ಅವರ ಉದ್ಯೋಗಕ್ಕೆ ಪೂರಕವಾಗಿ ಕೈಮಗ್ಗಗಳ ಪೂರೈಕೆ, ಡಾಬಿ ಮತ್ತು ಜಕಾರ್ಡ್ ಪೂರೈಕೆ ಹಾಗೂ ದುಡಿಯುವ ಬಂಡವಾಳ